ನಿಮಗೆ ಅನುಕೂಲವಾಗಲೆನ್ನುವ ದೃಷ್ಟಿಯಿಂದ ಸಲಹೆ ಕೊಡುತ್ತಿದ್ದೇನೆ. ಈಗ ಮುಗಿಯಿತು ಆದರೆ, ಮುಂದೆ ಬರುವ ಸಂದರ್ಭದಲ್ಲಾದರೂ ಇದರ ಬಗ್ಗೆ ಎಚ್ಚರ ವಹಿಸಬೇಕು.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "1998ರ ಕರ್ನಾಟಕ ಧನ ವಿನಿಯೋಗ (ನಂ. 1) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನು ಪರ್ಯಾಯಲೋಚಿಸುವುದು

ಖಂಡ 2 ಮತ್ತು 3

ಅಧ್ಯಕ್ಷರು : ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 3 ನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ 'ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಸಿದ್ದರಾಮಯ್ಯ (ಹಣಕಾಸು ಸಚಿವರು) ಮಾನ್ಯ ಅಧ್ಯಕ್ಷರೇ, 1998ರ ಕರ್ನಾಟಕ ಧನ ವಿನಿಯೋಗ (ನಂ.1) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, '1998ರ ಕರ್ನಾಟಕ ಧನ ವಿನಿಯೋಗ (ನಂ.1) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ, 1998

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿದ್ಧರಾಮಯ್ಯ (ಹಣಕಾಸು ಸಚಿವರು) : ಮಾನ್ಯ ಅಧ್ಯಕ್ಷರೆ, 1998ರ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಸಿದ್ಧರಾಮಯ್ಯ : ಇದು ಕಾನ್‌ಸಿಕ್ವೆನ್ಸಿಯಲ್ ಬಿಲ್ ಆಗಿದ್ದು, ನಾನು ನನ್ನ ಆಯವ್ಯಯದ ಭಾಷಣದಲ್ಲಿ, ಸರ್ಕಾರಿ ಸಾಮ್ಯದ ಸಂಸ್ಥೆಗಳು ಪರ್ಚೇಸ್ ಮಾಡುವಾಗ ಟ್ಯಾಕ್ಸ್ ಡಿಡಕ್ಟ್ ಮಾಡಿಕೊಂಡು ಬೇರೆ ಬೆಲೆ ಕೊಡುವದರ ಬಗ್ಗೆ ತಿಳಿಸಿದ್ದೆ. ಅದರ ಬಗ್ಗೆ ಈ ಬಿಲ್‌ನಲ್ಲಿ ಮಾಡಿದ್ದೇವೆ. ಆದರೆ, ಕೆಲವು ಪಬ್ಲಿಕ್ ಅಂಡರ್‌ಟೇಕಿಂಗ್‌ಗಳಿಗೆ ಕಷ್ಟವಾಗುತ್ತದೆಂದು ಹೇಳಿದ್ದರಿಂದ ಎಕ್ಸಂಪ್ಷನ್ ಕೊಡುವುದಕ್ಕೋಸ್ಕರ ಇದನ್ನು ಮಾಡಲಾಗಿದೆ. ಇನ್ನೊಂದು ತಿದ್ದುಪಡಿ ಯಾವುದೆಂದರೆ, ಸಿನಿಮಾಗಳ ಶೋ ಟ್ಯಾಕ್ಸ್ ಅನ್ನು ನಾನು ಹೆಚ್ಚು ಮಾಡಿದ್ದೆ. ಸಿನಿಮಾ ಉದ್ಯಮಕ್ಕೆ ಸಂಬಂಧಿಸಿದವರೆಲ್ಲರೂ ಬಂದು ಇಷ್ಟೊಂದು ಜಾಸ್ತಿ ಮಾಡಿರುವುದರಿಂದ ಬಹಳ ಕಷ್ಟವಾಗುತ್ತದೆಂದು ತಿಳಿಸಿದ್ದರಿಂದ ಅದನ್ನು ಸ್ವಲ್ಪ ಕಡಿಮೆ ಮಾಡಿರುವುದಕ್ಕೆ ತಿದ್ದುಪಡಿ ತರಲಾಗಿದೆ. ಮೂರನೆಯದು, ಕಮೀಷನರ್‌ಗೆ ಇದ್ದಂಥ ಪವರ್ಸ್ ಅನ್ನು ಜಾಯಿಂಟ್ ಕಮೀಷನರ್ ಅವರಿಗೆ ವರ್ಗಾವಣೆ ಮಾಡುವ ಬಗ್ಗೆ ಸರಳವಾದ ತಿದ್ದುಪಡಿ ತಂದಿದ್ದೇವೆ. ನಾಲ್ಕನೆಯದು, ಹತ್ತಿಗೆ ಕೊನೆಯ ಪಾಯಿಂಟ್‌ನಲ್ಲಿ ಸೇಲ್ಸ್ ಟ್ಯಾಕ್ಸ್ ಕಲೆಕ್ಟ್ ಮಾಡುತ್ತಿರುವುದನ್ನು ಫಸ್ಟ್ ಪಾಯಿಂಟ್‌ಗೆ ತೆಗೆದುಕೊಂಡು ಬರುವುದಾಗಿ ನಾನು ನನ್ನ ಬಜೆಟ್ ಭಾಷಣದಲ್ಲಿ ತಿಳಿಸಿದ್ದೆ. ಈ ದಿಸೆಯಲ್ಲಿ ರೈತರು ಹಾಗೂ ವ್ಯಾಪಾರಗಾರರು ಚಳುವಳಿ ಮಾಡಿದ ನಂತರ, ಅವರೆಲ್ಲರಿಗೂ ಕರೆದು ಚರ್ಚಿಸಿ ಸಹಕಾರ, ಒಪ್ಪಿಗೆ ಪಡೆದುಕೊಂಡು ಅದನ್ನು ಫಸ್ಟ್ ಪಾಯಿಂಟ್‌ನಿಂದ ಫಸ್ಟ್ ಪರ್ಚೇಸ್ ಪಾಯಿಂಟ್‌ಗೆ ಮಾಡುವ ಬಗ್ಗೆ ತಿದ್ದುಪಡಿ ತರಲಾಗಿದೆ. ಇವೆಲ್ಲಾ ಸರಳವಾದ ತಿದ್ದುಪಡಿಗಳಾಗಿರುವುದರಿಂದ ಇದಕ್ಕೆ ತಮ್ಮ ಒಪ್ಪಿಗೆ ನೀಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ '1998ರ ಕರ್ನಾಟಕ ಮಾರಾಟ ತೆರಿಗೆ (ಕೆಲವು ಇತರ ಕಾನೂನುಗಳು) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು'

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಯಲೋಚಿಸುವುದು

ಖಂಡ 2 ಮತ್ತು 3

ಅಧ್ಯಕ್ಷರು : ಖಂಡ 2 ಮತ್ತು 3ನ್ನು ವಿಧೇಯಕ, ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 3ನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, 'ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಸಿದ್ಧರಾಮಯ್ಯ (ಹಣಕಾಸು ಸಚಿವರು) : ಮಾನ್ಯ ಅಧ್ಯಕ್ಷರೆ, 1998ರ ಕರ್ನಾಟಕ ಮಾರಾಟ ತೆರಿಗೆ (ಕೆಲವು ಇತರ ಕಾನೂನುಗಳು) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ '1998ರ ಕರ್ನಾಟಕ ಮಾರಾಟ ತೆರಿಗೆ (ಕೆಲವು ಇತರ ಕಾನೂನುಗಳು) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಇದು ಅರ್ಥವಾಗದಿರತಕ್ಕಂಥಾದ್ದು, ಬಜೆಟ್ ಪಾಸ್ ಮಾಡಬೇಕು, ನಾಳೆ ಮೇಲ್ಮನೆಗೆ ಹೋಗಿ ಪುನಃ ಅಲ್ಲಿಂದ ಅಂಗೀಕಾರ ಪಡೆದು ಬರಬೇಕೆಂಬುದು ಸರಿ. ಆದರೆ, ಇಷ್ಟೊಂದು ತರಾತುರಿಯಲ್ಲಿ ಒಂದಾದ ಮೇಲೊಂದರಂತೆ ವಿಧೇಯಕಗಳನ್ನು ತರುವುದರ ಅವಶ್ಯಕತೆಯೇನು? ಎಂದಾದರೂ ಈ ರೀತಿ ಆಗಿದೆಯೇ? ಬೆಳಿಗ್ಗೆಯಾದರೂ ಕೊಟ್ಟಿದ್ದರೆ ನೋಡಬಹುದಾಗಿತ್ತು.

ಶ್ರೀ ಸಿದ್ಧರಾಮಯ್ಯ : ಇವೆಲ್ಲವೂ ಕಾನ್‌ಸಿಕ್ವೆನ್ಷಿಯಲ್ ಬಿಲ್‌ಗಳು, ಬಹಳ ಚಿಕ್ಕ ತಿದ್ದುಪಡಿಗಳಾಗಿವೆ ಅಷ್ಟೇ.

ಶ್ರೀ ಕೆ. ಎಸ್. ಈಶ್ವರಪ್ಪ : ಎಲ್ಲವೂ ಚಿಕ್ಕ ತಿದ್ದುಪಡಿಗಳೆಂದು ಹೇಳುತ್ತಿದ್ದೀರಲಾ, ಹಿಂದಿನ ದಿವಸವೇ ಇದನ್ನು ನಮಗೆ ಕೊಡುವುದಕ್ಕಾಗುವುದಿಲ್ಲವೇ? ಇಲ್ಲಿ ಪುಗಸಟ್ಟೆಗೆ ತರಾತುರಿಯಲ್ಲಿ ತಂದು ಪಾಸ್ ಮಾಡಿಕೊಂಡು ಕಾರ್ಯಕ್ರಮವಿದೆಯೆಂದು ಪಾಲ್ಗೊಳ್ಳಲು ಹೋಗುತ್ತಿದ್ದೀರಿ. ತಮಗೆ ಬಹುಮತವಿದೆಯೆಂದು ಈ ರೀತಿ ಮಾಡುತ್ತಿದ್ದೀರಿ. ತಿದ್ದುಪಡಿಯನ್ನು ಓದುವುದಕ್ಕೆ ನಮಗೆ ಅವಕಾಶವಿಲ್ಲವೆಂದರೆ ಹೇಗೆ?

ಶ್ರೀ ಸಿದ್ಧರಾಮಯ್ಯ : ಯಾವಾಗಲೂ ವಿರೋಧ ಮಾಡುವುದೇ ಆಗಿದೆ, ಈಗ ತಿದ್ದುಪಡಿಗಳನ್ನು ಹಂಚುತ್ತಿರುವುದರಿಂದ ಓದಿಕೊಳ್ಳಿ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಎಲ್ಲಾ ಹಿರಿಯ ಸದಸ್ಯರುಗಳಿಗೆ ಗೊತ್ತಿರುವಂತೆ, ಬೇಡಿಕೆಗಳನ್ನು ಈ ಸದನ ಅಂಗೀಕರಿಸುವುದಕ್ಕೆ ಮೊದಲು ಅದಕ್ಕೆ ಸಂಬಂಧಪಟ್ಟಿರುವ ಕಾನ್‌ಸಿಕ್ವೆನ್ಷಿಯಲ್ ಮನಿ ಬಿಲ್‌ಗಳನ್ನು ನಾವು ಸದನದಲ್ಲಿ ಮಂಡಿಸುವುದಕ್ಕಾಗುವುದಿಲ್ಲ. ಯಾವಾಗ ತಾವು ಡಿಮ್ಯಾಂಡ್‌ಗಳಿಗೆ ಒಂದು ಸಲ ಅಂಗೀಕಾರ ಕೊಡುತ್ತೀರಿ, ಅಂಗೀಕಾರದ ನಂತರವೇ ಕಾನ್‌ಸಿಕ್ವೆನ್ಷಿಯಲ್ ಬಿಲ್‌ಗಳನ್ನು ನಾವು ಸಭೆಗೆ ಹಂಚಬೇಕು. ಇದು ಹೊಸ ಸದಸ್ಯರುಗಳಿಗೆ ಗೊತ್ತಿರಲಿಕ್ಕಿಲ್ಲ. ಅದಕ್ಕಿಂತ ಮುಂಚಿತವಾಗಿ ನಾವು ಸದರಿ ಬಿಲ್‌ಗಳನ್ನು ಕೊಡುವುದಕ್ಕಾಗುವುದಿಲ್ಲ, ತಾವು ಇದನ್ನು ದಯಮಾಡಿ ತಿಳಿದುಕೊಳ್ಳಬೇಕು. ಡಿಮ್ಯಾಂಡ್ ಪಾಸ್ ಆಗುವುದಕ್ಕಿಂತ ಮೊದಲು ಇಲಾಖೆಗಳ ಕಾನ್‌ಸಿಕ್ವೆನ್ಷಿಯಲ್ ಮನಿ ಬಿಲ್‌ಗಳನ್ನು ಕೊಡುವುದಕ್ಕಾಗುವುದಿಲ್ಲ. ಡಿಮ್ಯಾಂಡ್‌ಗೆ ಒಪ್ಪಿಗೆ ಕೊಟ್ಟ ನಂತರವೇ ಕಾನ್‌ಸಿಕ್ವೆನ್ಷಿಯಲ್ ಮನಿ ಬಿಲ್‌ಗಳನ್ನು ನಾವು ನಿಮ್ಮೆಲ್ಲರಿಗೂ ಹಂಚುತ್ತೇವೆ. ಇದರ ಬಗ್ಗೆ ಈ ಹಂತದಲ್ಲಿ ಚರ್ಚೆಗೆ ಅವಕಾಶವಿಲ್ಲ ತಾವುಗಳೆಲ್ಲರೂ ದಯವಿಟ್ಟು ಇದರ ಬಗ್ಗೆ ವಿಚಾರ ಮಾಡಬೇಕು.

6.40 ಪಿ.ಎಂ.

ಶ್ರೀ ಎಸ್. ಸಿದ್ಧರಾಮಯ್ಯ : ಇದು 204 ಕೋಟಿ 37 ಲಕ್ಷದ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಸಭೆಯ ಮುಂದಿಟ್ಟಿದ್ದೇನೆ. ಇದರಲ್ಲಿ ಸುಮಾರು 19 ಕೋಟಿ 82 ಕೋಟಿ ರೂಪಾಯಿಗಳು ಸೆಂಟ್ರಲ್ ಅಸಿಸ್ಟೆನ್ಸ್ ಇದೆ, ಅದು ಜಮಾ ಆಗುವುದು, ಅಡಷನಲ್ಲಾಗಿ 59 ಕೋಟಿ 90 ಲಕ್ಷ ಇದರಲ್ಲಿ ಅಡ್ಜೆಸ್ಟ್‌ಮೆಂಟ್ ಆಗುತ್ತದೆ. ಔಟ್ ಗೋಯಿಂಗ್ ಕ್ಯಾಶ್ 124 ಕೋಟಿ 65 ಲಕ್ಷ ರೂಪಾಯಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಪೂರಕ ಡಿಮಾಂಡ್ಸ್ ಬಗ್ಗೆ ಚರ್ಚೆ ಮಾಡುವುದು ಬೇಡವಾ?

ಅಧ್ಯಕ್ಷರು : ಅವರು ಎಕ್ಸ್‌ಪ್ಲೈನ್ ಮಾಡಲಿ.

ಡಾ॥ ಎಂ.ಪಿ. ಕರ್ಕಿ : ನಮಗೆ ಕೊಟ್ಟಿರತಕ್ಕ ಅಜೆಂಡಾದಲ್ಲಿ ಮಂಡನೆ ಮಾತ್ರ ಇದೆ. ಸ್ವೀಕಾರ ಮಾಡುವುದಕ್ಕೆ ಕೇಳತಕ್ಕಂಥದ್ದು ಇಲ್ಲ. ನಮಗೆ ಸರ್ಕ್ಯುಲರ್ ಮಾಡಿದ ಅಜೆಂಡಾದಲ್ಲಿ ಅದೆಲ್ಲಾ ಇಲ್ಲ.

ಅಧ್ಯಕ್ಷರು : ಸಪ್ಲಿಮೆಂಟರಿ ಅಜೆಂಡಾ ಕಳುಹಿಸಿದ್ದಾರೆ.

ಶ್ರೀ ಸಿ. ಸಿದ್ಧರಾಮಯ್ಯ : 204 ಕೋಟಿ 37 ಲಕ್ಷಕ್ಕೆ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ತೆಗೆದುಕೊಂಡು ಬಂದು ಕೇಳುತ್ತಿದ್ದೇನೆ. 19 ಕೋಟಿ ಇದು ಕೇಂದ್ರ ಸರ್ಕಾರದಿಂದ ಬಂದಿದ್ದು ಅಡ್ಜೆಸ್ಟ್‌ಮೆಂಟ್ ಆಗುತ್ತದೆ, 59 ಕೋಟಿ 90 ಲಕ್ಷ ಕೂಡ ಅಡಿಷನಲ್ ರಿಸೋರ್ಸಸ್ ಇದೂ ಕೂಡ ಅಡ್ಜೆಸ್ಟ್‌ಮೆಂಟ್ ಆಗುತ್ತದೆ. ಔಟ್ ಗೋಯಿಂಗ್ ಕ್ಯಾಶ್ 124 ಕೋಟಿ 65 ಲಕ್ಷ ರೂಪಾಯಿ ಇದರಲ್ಲಿ 204 ಕೋಟಿ 37 ಲಕ್ಷದಲ್ಲಿ ಬಹಳ ಮುಖ್ಯವಾಗಿ ನಮಗೆ 70 ಕೋಟಿ

ರೂಪಾಯಿ ನ್ಯಾಷನಲ್ ಗೇಮ್ಸ್ ಮಾಡುವುದಕ್ಕಾಗಿ ಓವರ್ ಡ್ರಾಫ್ಟ್ ತೆಗೆದುಕೊಂಡಿದ್ದು ಬಾಕಿ ಕೊಡಬೇಕಾಗಿತ್ತು, ಅದಕ್ಕೋಸ್ಕರ ಇದರನ್ನು ಬಡ್ಜೆಟ್‌ನಲ್ಲಿ ಹಾಕಿರಲಿಲ್ಲ, ಅದಕ್ಕೋಸ್ಕರ ಸಪ್ಲಿಮೆಂಟರಿ ಎಸ್ಟಿಮೇಟ್‌ನಲ್ಲಿ ತಂದು ಅದನ್ನು ಕೊಡಬೇಕೆಂದು ಮಾಡಿದ್ದೇವೆ. ಅದರ ಜೊತೆಗೆ 28 ಕೋಟಿ ರೂಪಾಯಿಗಳು ಎನ್‌ಸಿಡಿಸಿಗೆ ಬೇರೆ ಬೇರೆ ಸ್ಪಿನ್ನಿಂಗ್ ಮಿಲ್‌ಗಳು, ಸೊಸೈಟಿಗಳು ಕೊಡಬೇಕಾಗಿತ್ತು, ಅದನ್ನು ಸರ್ಕಾರ ಕೊಡಬೇಕಾಗಿದೆ. ಅದನ್ನೂ ಬಡ್ಜೆಟ್‌ನಲ್ಲಿ ಒದಗಿಸುವುದಕ್ಕೆ ಸಾಧ್ಯವಾಗಲಿಲ್ಲ, ಆ ಕಾರಣಕ್ಕಾಗಿ ಇದನ್ನು ಇಲ್ಲಿ ಸಪ್ಲಿಮೆಂಟರಿ ಎಸ್ಟಿಮೇಟ್‌ನಲ್ಲಿ ತಂದಿದ್ದೇವೆ. ಮತ್ತೆ 59 ಕೋಟಿ ರೂಪಾಯಿಗಳು ಇದಕ್ಕೋಸ್ಕರ ಎಸ್‌ಸಿಪಿ ಮತ್ತು ಟಿಎಸ್‌ಪಿ ಅದನ್ನು ಪೂಲ್ ಮಾಡತಕ್ಕಂಥದ್ದು, ಅವರು ಪೂಲ್ ಮಾಡುವುದನ್ನು ತೆಗೆದುಕೊಂಡು ಬಂದು ಖರ್ಚು ಮಾಡುವುದು, ಬೇರೆ ಬೇರೆ ಇಲಾಖೆಗಳು ಪೂಲ್ ಮಾಡಿ ಎಸ್‌ಸಿಪಿ ಮತ್ತು ಟಿಎಸ್‌ಪಿ ಫಂಡ್ ನಿಂದ ಪೂಲ್ ಮಾಡಿ ಖರ್ಚು ಮಾಡುವುದು, ಬಡ್ಜೆಟ್ ಮಂಡನೆ ಮಾಡುವಾಗ 50 ಕೋಟಿ ರೂಪಾಯಿಗಳನ್ನು ಏಪ್ರಿಲ್ ಒಂದನೇ ತಾರೀಖಿನಿಂದ ಖರ್ಚು ಮಾಡುವ ರೀತಿಯಲ್ಲಿ ಏನು ಮಾಡಿತ್ತು, ಈಗ ಮತ್ತೆ 59 ಕೋಟಿ ರೂಪಾಯಿಗಳನ್ನು ನಾವು ಪೂಲ್ ಮಾಡಿದ್ದೇವೆ. ಇದನ್ನು ಸಪ್ಲಿಮೆಂಟರಿ ಎಸ್ಟಿಮೇಟ್ ತರುತ್ತಿದೇನೆ. ಕ್ಯಾಶ್ 124 ಕೋಟಿ ರೂಪಾಯಿಗಳು ಇದ್ದರೂ ಕೂಡ ಇದರಲ್ಲಿ 63 ಕೋಟಿ ನಮಗೆ ಹೆಚ್ಚುವರಿಯಾಗಿ ಬರುತ್ತದೆ. ಅದು ಮಾತ್ರ ನಮಗೆ ಡಿಫಿಸಿಟ್ ಆಗುತ್ತದೆ. ಉಳಿದದ್ದು ಅಡ್ಜೆಸ್ಟ್‌ಮೆಂಟ್ ಅದನ್ನು ಅಲ್ಲಿ ಮಾಡತಕ್ಕಂಥದ್ದು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬಹಳ ಮುಖ್ಯವಾಗಿ ಪೂರಕ ಅಂದಾಜಿನ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೀರಿ, ನಮಗೆ ಗೊತ್ತಿರುವ ಹಾಗೆ ಪೂರಕ ಅಂದಾಜುಗಳ ಬಗ್ಗೆ ಚರ್ಚೆ ಮಾಡುವುದು ಸದನದ ಕಾರ್ಯಕಲಾಪವನ್ನು ತೆಗೆದು ನೋಡಿದಾಗ ನನಗೆ ಅದು ಅನುಭವದ ಮೇಲೆ ಸುಮಾರು ಮೂರು, ನಾಲ್ಕು, ಐದು ಗಂಟೆ ಅಥವಾ ದಿವಸ ಗಟ್ಟಲೆ ಚರ್ಚೆ ಮಾಡಿದ ಉದಾಹರಣೆಗಳಿವೆ. ನಾವು ಅವತ್ತಿನಿಂದ ವಿರೋಧ ಮಾಡಿಕೊಂಡು ಬಂದಿರುವಂತಹ ಪೇಜ್ ನಂ. ಅರರಲ್ಲಿ ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಕ್ರೀಡೆಗಳಿಗೆ ಸಂಬಂಧಪಟ್ಟಂತೆ ಬಾಕಿ ಇರುವ ಬಿಲ್‌ಗಳನ್ನು ಪಾವತಿ ಮಾಡಲು ಮತ್ತು ಬ್ಯಾಂಕಿನಿಂದ ಪಡೆದು ಓವರ್ ಡ್ರಾಫ್ಟ್‌ಗೆ ಬಡಿ ಪಾವತಿ ಮಾಡಲು 70 ಕೋಟಿ ರೂಪಾಯಿಗಳ ಅಗತ್ಯ ಇದೆ ಎಂದು ಹೇಳುತ್ತೀರಿ, ಇನ್ನೊಂದು ಕಡೆ 30 ಕೋಟಿ ಒಟ್ಟು 100 ಕೋಟಿ ರೂಪಾಯಿಗಳ ಅಗತ್ಯವಿದೆ. ನಾನು ನಿಮಗೆ ಕೇಳುವುದು, ಈ 70 ಕೋಟಿ ರೂಪಾಯಿಯಲ್ಲಿ ಬಿಲ್ ಬಾಕಿ ಎಷ್ಟು, ಬಡ್ಡಿ ಎಷ್ಟು, ಏಕೆ ಇಷ್ಟು ದೊಡ್ಡ ಪ್ರಮಾಣದಲ್ಲಿ ನೀವು ಬಡ್ಡಿ ಕೊಡುತ್ತಿದ್ದೀರಿ, ಇದು ಚರ್ಚೆಯಾಗಬೇಕು. ನಾವು ಮಾಹಿತಿಯನ್ನು ಡಿಟೇಲ್ ಕೇಳಬೇಕು, ಮೊದಲನೆಯದು ಈ ಸದನದಲ್ಲಿ ನಾವು ಪ್ರಸ್ತಾಪ ಮಾಡಿದ್ದೇವೆ, ಈ ಯೋಜನೆಯನ್ನು ಕೈಗೊಂಡ ಸಂದರ್ಭದಲ್ಲಿ ನಾವು ಹುಡ್ಕೋದಿಂದ ಸಾಲ ತೆಗೆದುಕೊಂಡೆವು, ಅದು ಈಗಾಗಲೇ ಸೇರಿದೆ. 70 ಕೋಟಿ ರೂಪಾಯಿ ಬರೀ ಬಡ್ಡಿ ಮತ್ತು ಸಾಲದ ಕಂತು ನೀವು ಕಟ್ಟುತ್ತೀರಿ ಎಂದರೆ ಒಟ್ಟು ಓವರ್ ಡ್ರಾಫ್ಟ್ ಎಷ್ಟು ತೆಗೆದುಕೊಂಡಿದ್ದೀರಿ, ಸಾಲ ತೆಗೆದುಕೊಂಡಿರುವುದು ಎಷ್ಟು,

ಎಷ್ಟೆಷ್ಟು ಬಡ್ಡಿ ನಾವು ಕೊಟ್ಟಿದ್ದೇವೆ, ಇದು ಒಂದು ಡೀಟೈಲ್ ಕೊಡಿ. ಹಾಗೂ ತೆಗೆದುಕೊಂಡಿರುವ ಸಾಲ ಎಷ್ಟು ಯಾವ ಯಾವುದರಲ್ಲಿ ಎಷ್ಟೆಷ್ಟು ಸಾಲ ತೆಗೆದುಕೊಂಡಿದ್ದೀರಿ.

ಶ್ರೀ ಸಿದ್ಧರಾಮಯ್ಯ : 50 ಕೋಟಿ ಓವರ್ ಡ್ರಾಫ್ಟ್ ತೆಗೆದುಕೊಂಡು ಅದು ಕೆಲವು ಬಿಲ್ಸ್ ಇನ್ನು ಲೆಕ್ಕ ಹಾಕಿರಲಿಲ್ಲ, 50 ಕೋಟಿ ರೂಪಾಯಿ ಜೊತೆಗೆ ಬಿಲ್‌ಗಳ ಬಡ್ಡಿ ಪೆಂಡಿಂಗ್ ಇತ್ತು ಮತ್ತು ಎಲ್ಲಾ ಸೇರಿಸಿ 70 ಕೋಟಿ ರೂಪಾಯಿ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಪೂರಕ ಅಂದಾಜುಗಳ ಬಗ್ಗೆ ಚರ್ಚೆಗೆ ಅವಕಾಶ ಕೊಡಿ.

MR. SPEAKER : We will take up Supplementary Demands tommorow.

ಶ್ರೀ ಸಿದ್ಧರಾಮಯ್ಯ : ಚರ್ಚೆ ಮಾಡಬೇಕಾ? ಚರ್ಚೆ ಮಾಡುವುದು ಏನೂ ಇಲ್ಲ. ಮೂರು ಅಮೌಂಟ್ ಹೆಚ್ಚಿಗೆ ಆಗಿದೆ. 70 ಕೋಟಿ ರೂಪಾಯಿ ನ್ಯಾಷನಲ್ ಗೇಮ್ಸ್ ಸ್ಪೋರ್ಟ್ಸ್‌ಗೆ ಅದು ತೀರಿಸದ ಇದ್ದರೆ ಬಡ್ಡಿ ಬೆಳೆದುಕೊಂಡು ಹೋಗುತ್ತದೆ. ಎನ್ನುವ ಕಾರಣಕ್ಕಾಗಿ ಸಪ್ಲಿಮೆಂಟರಿ ಬಡ್ಜೆಟ್ ಒದಗಿಸಿ ಕೊಡತಕ್ಕಂಥದ್ದು ಒಂದು. ಎರಡನೆಯದು 28 ಕೋಟಿ ರೂಪಾಯಿ ಎನ್‌ಸಿಡಿಸಿ ಸೊಸೈಟಿಗಳಿಗೆ ಸಲಾ ಕೊಡಬೇಕು ಇದನ್ನು ಸರ್ಕಾರ ಕೊಡಬೇಕೆಂದು ಇಟ್ಟು ಕೊಂಡಿದ್ದೇವೆ. ಅದು ಒಂದು 59 ಕೋಟಿ ರೂಪಾಯಿ ಎನ್‌ಸಿಪಿ ಇದು ಏನು ಹೊಸ ಲೆಕ್ಕ ಅಲ್ಲ. ಬೇರೆ ಬೇರೆ ಇಲಾಖೆಯಿಂದ ತೆಗೆದು ಒಟ್ಟಿಗೆ ಖರ್ಚು ಮಾಡುವುಕ್ಕೋಸ್ಕರ ಇದರಲ್ಲಿ ಸಪ್ಲಿಮೆಂಟರಿಯಲ್ಲಿ ತೆಗೆದುಕೊಳ್ಳುತ್ತೇವೆ. ಕ್ಯಾಷ್ ಔಟ್ ಗೋ ಅಲ್ಲ. ಇದು ಅನಿವಾರ್ಯ. 59 ಕೋಟಿ ಪೂಲ್ ಮಾಡಿದ ಹಣ ಬಡ್ಜೆಟ್‌ನಲ್ಲಿ ಇಡಬೇಕು, ಪೂಲ್ ಮಾಡತಕ್ಕಂತಹ ಹಣ ಅಂದರೆ ನಾವು ಹೊಸದಾಗಿ ಅಲ್ಲ ಬೇರೆ ಬೇರೆ ಇಲಾಖೆಗಳಿಂದ ಕಲೆಕ್ಟ್ ಮಾಡಿ ಒಂದು ಖರ್ಚು ಮಾಡತಕ್ಕಂಥದ್ದು.

ಪ್ರಕಟಣೆ

ಅಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ 118 ರ ಮೇರೆಗೆ ದಿನಾಂಕ 15ನೇ ಮೇ 1998 ರಂದು ವಿಧಾನ ಪರಿಷತ್ತು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿ ಇಲ್ಲದೆ ಅನುಮೋದಿಸಿದೆ ಎಂದು ಈ ಮೂಲಕ ತಿಳಿಸುತ್ತಿದ್ದೇನೆ.

1. ಕರ್ನಾಟಕ ಅಬಕಾರಿ ತಿದ್ದುಪಡಿ ವಿಧೇಯಕ 1998
2. ಕರ್ನಾಟಕ ವಿದ್ಯುಚ್ಛಕ್ತಿ ಕಾನೂನು ಮರ್ಜಕ ತಿದ್ದುಪಡಿ ವಿಧೇಯಕ 1998
3. ಕರ್ನಾಟಕ ನ್ಯಾಯಾಲಯ ಫೀಸ್ ಮತ್ತು ಮೌಲ್ಯಗಳ ನಿಗಧಿ ತಿದ್ದುಪಡಿ ವಿಧೇಯಕ 1998.